ಶ್ರೀ ಕೆ.ಎಂ. ಶಿವಲಿಂಗೇಗೌಡ :– ಕೊನೆಯದಾಗಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡುವುದೇನೆಂದರೆ, ಯಾವುದೇ ದ್ವೇಷ ಬೇಡಿ ನಾವು ಶಾಸಕರಾಗಿದ್ದೇವೆ. ಈಗ ನಮ್ಮ ಕ್ಷೇತ್ರದಲ್ಲಿ ಒಬ್ಬ ಅಸಿಸ್ಟೆಂಟ್ ಇಂಜಿನಿಯರ್ ಇದ್ದರು ಅವರಿಗೆ ಇನ್ನು 6 ತಿಂಗಳ ಅವಧಿ ಇತ್ತು ಅವರನ್ನು ವರ್ಗಾವಣೆ ಮಾಡಿದ್ದೀರಿ. ಹಿಂದೆ ಇದ್ದ ಬಿಜೆಪಿ ಶಾಸಕರೆ ಅವರನ್ನು ಹಾಕಿಸಿಕೊಂಡಿದ್ದರು, ಇನ್ನು 6 ತಿಂಗಳ ಅವಧಿ ಇದೆ, ನೀನು ಒಳ್ಳೆಯ ಕೆಲಸವನ್ನು ಮಾಡಿಕೊಂಡು ಹೋಗಪ್ಪವೆಂದು ಹೇಳಿ, ಒಂದು ಪತ್ರ ಬೇಕೆಂದರು, ಕೊಟ್ಟಿದ್ದೇವೆ, ಆದರೆ ನೀವು ಅವರನ್ನು ವರ್ಗಾವಣೆ ಮಾಡಿದ್ದೀರಿ. ದಯಮಾಡಿ ತಾಲ್ಲೂಕು ಮಟ್ಟದ ಅಧಿಕಾರಿಗಳನ್ನು ವರ್ಗಾವಣೆ ಮಾಡಬೇಕಾದರೆ, ಶಾಸಕರ ಭಾವನೆಗಳಿಗೆ ಸ್ಪಂದಿಸದೆ ಹೋದರೆ ಮಾನ್ಯ ಮುಖ್ಯಮಂತ್ರಿಗಳೆ, ನಿಮಗೆ ಕೆಟ್ಟ ಹೆಸರು, ಏಕೆಂದರೆ ವಿರುದ್ಧವಾದ ಶಾಸಕರು ಬಂದರೆ ನಾವೇನು ಸುಮ್ಮನೆ ಕೂರುವವರಲ್ಲ, ನಮಗು ಅವರಿಗು ಲಟಾಪಟಿ ನಡೆದಾಗ ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಬಹುದು, ಘರ್ಷಣೆಗಳಾಗಬಹುದು. ಆಗ ಮಾನ್ಯ ಮುಖ್ಯಮಂತ್ರಿಗಳಾದ ಯಡಿಯೂರಪ್ಪನವರ ಕಾಲದಲ್ಲಿ ಬಹಳ ಧಾಂದಲೆಯಾಯಿತು ಎಂಬ ಕೆಟ್ಟ ಹೆಸರು ನಿಮಗೆ ಬರುತ್ತದೆ. ಆದುದರಿಂದ ಶಾಸಕರನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಅವರನ್ನು ಪ್ರೀತಿ, ವಿಶ್ವಾಸಕ್ಕೆ ತೆಗೆದುಕೊಂಡು ಆಡಳಿತ ನಡೆಸಿದರೆ ನಿಜವಾಗಲು ನಿಮಗೆ ಒಳ್ಳೆಯದಾಗುತ್ತದೆ. ಆ ಒಂದು ಭಾವನೆಯಲ್ಲಿ ಆಡಳಿತ ಮಾಡಬೇಕು ದ್ವೇಷದ ರಾಜಕಾರಣ ಮಾಡಬೇಡಿ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಾನೇನು ನಿಮಗೆ ಸೂಚನೆಯನ್ನು ಕೊಡುವುದಿಲ್ಲ, ಆದೇಶ ಕೊಡುವುದಿಲ್ಲ, ಕೈ ಮುಗಿದು ಮನವಿ ಮಾಡುತ್ತೇನೆ, ಎಲ್ಲರನ್ನು ಒಂದೇ ಭಾವನೆಯಿಂದ ನೋಡಿ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಸರ್ಕಾರ ಮಂಡಿಸಿರುವ ಬಜೆಟ್ ಬಗ್ಗೆ ನನ್ನ ಸಂಪೂರ್ಣವಾದ ವಿರೋಧವಿದೆ, ನಿಮ್ಮ ಚುನಾವಣೆ ಭರವಸೆಗಳನ್ನು ಈಡೇರಿಸಿಕೊಳ್ಳುವುದಕ್ಕೋಸ್ಕರ ಈ ರಾಜ್ಯದ ರೈತರನ್ನು ಹಾಗು ರಾಜ್ಯವನ್ನು ಬಲಿಕೊಟ್ಟಿದ್ದೀರೆಂದು ನಾನು ಅಂತಿಮವಾಗಿ ಹೇಳಬಯಸುತ್ತೇನೆ, ನನಗೆ ಮಾತನಾಡಲು ಇಷ್ಟೋಂದು ಅವಕಾಶ ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು :– ಮಾನ್ಯ ಮುಖ್ಯಮಂತ್ರಿಗಳು, ದಿ: ಎ.ಪಿ.ಬಾಬು, ಅಧ್ಯಕ್ಷರು, ಮಧ್ಯಪಾನ ವಿರೋಧಿ ಅಂದೋಳನ ಇವರ ಕೊಲೆಯ ಬಗ್ಗೆ ಒಂದು ಹೇಳಿಕೆಯನ್ನು ಕೊಡುತ್ತಾರೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಮುಖ್ಯಮಂತ್ರಿಗಳು) :– ಮಾನ್ಯ ಅಧ್ಯಕ್ಷರೆ, (ಹೇಳಿಕೆಯ ಪ್ರತಿಯನ್ನು ಲಗತ್ತಿಸಿದೆ)

ಶ್ರೀ ಬಿ. ಮುನಿಯಪ್ಪ (ಶಿಡ್ಲಘಟ್ಟ) :– ಸನ್ಮಾನ್ಯ ಅಧ್ಯಕ್ಷರೆ, 2008–09ನೇ ಸಾಲಿನ ಆಯವ್ಯಯದ ಮೇಲೆ ಚರ್ಚೆ ಮಾಡುವುದಕ್ಕೆ ನನಗೆ ಅವಕಾಶ ಮಾಡಿಕೊಟ್ಟಿದ್ದಕ್ಕೆ ಮೊದಲನೆಯದಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ರಾಜ್ಯದ ಮುಖ್ಯಮಂತ್ರಿಗಳು ಹಾಗು ಹಣಕಾಸಿನ ಮಂತ್ರಿಗಳು ಆಯವ್ಯಯವನ್ನು ಮಾಡುವ ಸಂದರ್ಭದಲ್ಲಿ ಅವರು ತನ್ನದೆ ಆದ ಆದ್ಯತೆಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಬಹುಶಃ ಕೃಷಿರಂಗಕ್ಕೆ ಹೆಚ್ಚು ಅವಕಾಶಗಳನ್ನು ಕೊಡತಕ್ಕಂಥ ಪ್ರಯತ್ನಗಳನ್ನು ಮಾಡಿದ್ದೇವೆ ಎನ್ನುವ ಮಾತುಗಳನ್ನು ಹೇಳಿದ್ದಾರೆ. ಹಲವಾರು ಹೊಸ ಪದಗಳ ಮುಖಾಂತರ ರೈತರಿಗೆ ಹೊಸ ಆಕರ್ಷಣೆಯನ್ನು ಸಹ ಕೊಟ್ಟಿದ್ದಾರೆ. ಕೊಟ್ಟಿರುವ ಹಲವಾರು ಕಾರ್ಯಕ್ರಮಗಳನ್ನು ಪರಿಶೀಲನೆ ಮಾಡಿ ಅವಲೋಕಿಸಿ ಒಳಹೊಕ್ಕು ನೋಡಿದಾಗ ಬಹುಶಃ ರೈತರ ಒಂದು ಶಾಶ್ವತವಾದ ಮತ್ತು ಅವರ ಬದುಕಿಗೆ ಮೆರುಗು ಕೊಡುವ ಕಾರ್ಯಕ್ರಮಗಳು ಬಹಳಷ್ಟು ಕಡಿಮೆ ಇವೆ. ಮಳೆ ಆಧರಿಸಿ ಕೃಷಿ ಮಾಡುವ ಸುಮಾರು 50 ಲಕ್ಷ ಕುಟುಂಬಗಳಿಗೆ, ಪ್ರತಿ ಕುಟುಂಬಕ್ಕೆ ಬ್ಯಾಂಕ್ ಮೂಲಕ ಒಂದು ಸಾವಿರ ರೂಪಾಯಿಗಳ ಸಹಾಯಧನದಂತೆ ಕೊಡುವ ಮಾತನ್ನು ನೇರವಾಗಿ ಹೇಳಿದ್ದಾರೆ. ಇವರು 50 ಲಕ್ಷ ಕುಟುಂಬಗಳ ಬ್ಯಾಂಕ್ ಅಕೌಂಟ್ ಅನ್ನು ಇವರು ಯಾವಾಗ ತೆಗೆಯುವುದು, ಯಾವಾಗ ಕೊಡುವುದು? ಅವರಿಗೆ ಕೇವಲ ಒಂದು ಸಾವಿರ ರೂಪಾಯಿಗಳನ್ನು ಕೊಡುತ್ತಿರುವುದು, ಇವತ್ತು ಬ್ಯಾಂಕ್‌ನಲ್ಲಿ ಅಕೌಂಟ್ ತೆರೆಯಲು ಕನಿಷ್ಟ ರೂ.500 ಇಡಬೇಕು ಇಲ್ಲವೆಂದರೆ ಅವರು ಬ್ಯಾಂಕ್ ಖಾತೆ ತೆರೆಯುವುದಿಲ್ಲ. ಇವರು ಅಕೌಂಟ್ ಚೆಕ್ ಕೊಡಬೇಕಾಗುತ್ತದೆ ಬೇರೆಯವರ ಚೆಕ್ ಕೊಡುವುದಕ್ಕಾಗುವುದಿಲ್ಲ. ಹೀಗಾಗಿ ಏನು 50 ಲಕ್ಷ ರೈತರಿಗೆ ಸಹಾಯ ಮಾಡಬೇಕೆಂದು ಸರ್ಕಾರ ಮಾಡಲು ಹೊರಟಿದೆ, ಇವತ್ತಿನ ಪರಿಸ್ಥಿತಿಯಲ್ಲಿ ಒಂದು ಸಾವಿರ ರೂಪಾಯಿ ಏನೇನು ಸಾಕಾಗುವುದಿಲ್ಲ. ಇವತ್ತು ರಸಾಯನಿಕ ಗೊಬ್ಬರ ಮತ್ತು ಬಿತ್ತನೆ ಬೀಜಕ್ಕೆ ಎಷ್ಟೊಂದು ಅಭಾವವಿರುವ ಸಂದರ್ಭದಲ್ಲಿ, ಯಾರು ಅತೀ ಸಣ್ಣ ರೈತರಿಗೆ ರಾಸಾಯನಿಕ ಗೊಬ್ಬರಕ್ಕೆ ಕೊಡಬೇಕಾಗಿತ್ತೊ, ಅವರಿಗೆ ಆ ರಿಯಾಯಿತಿಯನ್ನು ಕೊಡಬಹುದಾಗಿತ್ತು. ಈ ರೀತಿ ನೇರವಾಗಿ ನಗದಾಗಿ ಕೊಡುವುದರಲ್ಲಿ ನಿಜವಾಗಿ ಅರ್ಥವಿಲ್ಲ. ಇದರಿಂದ ಆ ರೈತರ ಬದುಕಿಗೆ ನೇರವಾಗಿ ಪ್ರಯೋಜನವಾಗುವುದಿಲ್ಲ, ಇದಕ್ಕಾಗಿ 500 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಇದು ಅನರ್ಥ, ಇದು ಅರ್ಥವಿಲ್ಲದ ಖರ್ಚು ಇದರಿಂದ ರೈತರಿಗೆ